ಕುಳಿತಿದ್ದವರೆಲ್ಲ ಕೈಕೈ ಹಿಸುಕಿಕೊಂಡು ಎದ್ದು ಮನೆಯ ಹಿಂದುಗಡೆಗೆ ನಡೆದರು.


ನಾನು ಸತ್ತೋದ ವಿಷಯ ಆಗಲೇ ನಮ್ಮೂರು ದಾಟಿ, ಅಕ್ಕ ಪಕ್ಕದ ಊರು, ಪಟ್ಟಣಗಳು, ಬೆಂಗಳೂರು, ವಿದೇಶಗಳಿಗೂ ತಲುಪಿತ್ತು. ಇಬ್ಬರು ಮಕ್ಕಳನ್ನು ಪಡೆದ ನಾನು, ನನ್ನ ಪತ್ನಿ ಅವರಿಂದ ಬದುಕಿನಲ್ಲಿ ಏನೆಲ್ಲ ತೊಂದರೆಗಳನ್ನು ಅನುಭವಿಸಿದ್ದೇವೆ ಎನ್ನುವುದು ನಮಗೆ ಮಾತ್ರ ಗೊತ್ತು. ಈ ಕಾಲಕ್ಕೆ ಈ ತಲೆಮಾರಿನ ಮಕ್ಕಳು ಮಾಡುತ್ತಿರುವುದು ಸರಿಯೇ ಅಥವಾ ಅಪ್ಪ ಅಮ್ಮಂದಿರು ಮಾಡುತ್ತಿರುವುದು ಸರಿಯೇ? ಎಲ್ಲರೂ ಸರಿ. ಎಲ್ಲರೂ ತಪ್ಪೆ. ಆಗಿದ್ದೆಲ್ಲ ಸರಿ. ಆಗುತ್ತಿರುವುದೆಲ್ಲ ಸರಿ. ಪತಿ ಪತ್ನಿ ಇಬ್ಬರಲ್ಲಿ ಮೊದಲು ಯಾರು ಸತ್ತರೆ ಒಳ್ಳೆಯದು? ಎನ್ನುವ ಪ್ರಶ್ನೆ ನಾನು ಬದುಕಿದ್ದಾಗ ನನ್ನನ್ನ ಕಾಡುತ್ತಿತ್ತು. ವಯಸ್ಸಾದ ಮೇಲೆ ಯಾರು ಸತ್ತರೆ ಏನು? ಈ ಬ್ರಹ್ಮಾಂಡವೇ ಹುಟ್ಟು ಸಾವಿನಿಂದ ಕೂಡಿದೆ. ಇನ್ನು ನಾವೇನು ಹುಲುಮಾನವರು?

ನನ್ನ ಪತ್ನಿ ಅತ್ತೂ ಅತ್ತು ಸುಸ್ತಾಗಿ ಹೋಗಿದ್ದಳು. ಅವಳಿಗೆ ಈಗ ಅರವತ್ತೈದು ವರ್ಷಗಳಾಗಿದ್ದು ಏನೇನೋ ಹೆಸರಿನ ಕಾಯಿಲೆಗಳು ಅಮರಿಕೊಂಡಿದ್ದವು. ಆದರೂ ದಿನಕ್ಕೆ ನಾಲ್ಕಾರು ಮಾತ್ರೆಗಳನ್ನು ನುಂಗುತ್ತ ಚೆನ್ನಾಗಿಯೇ ಓಡಾಡಿಕೊಂಡಿದ್ದಳು. ಬೆಂಗಳೂರಿನಲ್ಲಿ ಆಧುನಿಕ ಶೈಲಿಯ ಬದುಕನ್ನು ನಡೆಸಿದ್ದರಿಂದ ಇಷ್ಟು ವಯಸ್ಸಾದರೂ ಈಗಲೂ ನೋಡಲು ಚೆನ್ನಾಗಿಯೇ ಇದ್ದಳು. ದೇಶದ ಉದ್ದಗಲಕ್ಕೂ ನನ್ನ ಜೊತೆಗೆ ಓಡಾಡಿದ್ದ ಆಕೆ ನಾಲ್ಕಾರು ಭಾಷೆಗಳನ್ನು ತಿಳಿದಿದ್ದು ಹತ್ತಾರು ರೀತಿಯ ಜನರು, ಅವರ ಸಂಸ್ಕೃತಿಗಳನ್ನು ಬಲ್ಲವಳಾಗಿದ್ದಳು. ಇದಕ್ಕೆಲ್ಲ ಕಾರಣ ನಾನು ದೆಹಲಿಯ ಜೆ.ಎನ್.ಯು ವಿಶ್ವವಿದ್ಯಾಲಯದಲ್ಲಿ ಹತ್ತು ವರ್ಷಗಳ ಕಾಲ ನಿಯೋಜನೆ ಮೇಲೆ ಕೆಲಸ ಮಾಡಿದ್ದು. ಆಶ್ಚರ್ಯವೆಂದರೆ ನನ್ನ ವಯಸ್ಸು ಎಪ್ಪತ್ತು ದಾಟಿದ್ದರೂ ಸಾಯುವ ಕಾಲದಲ್ಲಿ ಆ ಕೆಲವು ನಿಮಿಷಗಳಲ್ಲಿ ಇನ್ನೂ ಬದುಕಬೇಕಲ್ಲ ಎಂಬ ಆಸೆ ನನ್ನಲ್ಲಿ ಮೂಡಿ ಸಾವಿಗೆ ಅಂಜಿಕೊಂಡಿದ್ದು! ನನ್ನ ಪತ್ನಿ `ಅಯ್ಯೋ ಮಕ್ಕಳಿಬ್ಬರಿಗೂ ಫೋನ್ ಮಾಡ್ರಪ್ಪ' ಎಂದು ಪದೇ ಪದೇ ಹೇಳುತ್ತಲೇ ಇದ್ದಳು.

ನನ್ನ ಆತ್ಮವೊ ಪ್ರೇತಾತ್ಮವೊ ಚಳಿಯಲ್ಲಿ ಗೋಡೆಯ ಮೇಲೆ ಒಂಟಿಯಾಗಿ ಕುಳಿತುಕೊಂಡಿದೆ. ನಾನು ರಾತ್ರಿ ಸಾಯದೆ ದಿನದಲ್ಲಿ ಸತ್ತು ಹೋಗಿದ್ದರೆ ಇವರಿಗೆಲ್ಲ ತೊಂದರೆಯಾಗುತ್ತಿರಲಿಲ್ಲ. ಸತ್ತ ಮೇಲೂ ಇವರಿಗೆ ತೊಂದರೆ ಮಾಡುತ್ತಿರುವುದು ನನಗೆ ದುಃಖವಾಗುತ್ತಿತ್ತು. ಆದರೆ ನನ್ನಿಂದ ಏನೂ ಮಾಡಲು ಆಗುತ್ತಿಲ್ಲ. ಇವರ ಜೊತೆಗೆ ಚಳಿಯಲ್ಲಿ ಹೀಗೆಯೆ ಎಷ್ಟೊತ್ತು ಕುಳಿತುಕೊಳ್ಳಬೇಕಾಗುತ್ತದೊ? ನಾನು ಕುಳಿತು ಕೊಂಡಿರುವುದು ಇವರಿಗೆ ಗೊತ್ತಾದರೆ ಬಹುಶಃ ಹೆದರಿಕೊಂಡು ಓಡಿಹೋಗುತ್ತಿದ್ದರೊ ಏನೊ? ಗೊತ್ತಾದರೆ ಯಾರಾದರು ಬಂದು ಚಳಿಗೆ ಬಟ್ಟೆ ತಂದು ಹೊದಿಸುತ್ತಿದ್ದರೋ ಏನೋ? ಸತ್ತು ಹೋಗಿರುವ ನನ್ನ ತಂದೆತಾಯಿಯರ ಜ್ಞಾಪಕ ದಿಢೀರನೆ ಬಂದು ಸುತ್ತಲೂ ನೋಡಿದೆ? ಗಾಢಾಂಧಕಾರ ನನ್ನ ತಂದೆ ತಾಯಿ ಎಲ್ಲಿರಬಹುದು? ಏನು ಮಾಡುತ್ತಿರಬಹುದು? ಎದ್ದೇಳಲು ನೋಡಿದೆ ಆಗಲಿಲ್ಲ. ನನ್ನ ಕೈಕಾಲುಗಳನ್ನು ನೋಡಿಕೊಂಡೆ? ಏನೂ ಕಾಣಿಸಲಿಲ್ಲ. ಆದರೆ ನಾನು ಬದುಕಿದ್ದಾಗ ನನ್ನ ತಂದೆತಾಯಿ ಇಬ್ಬರೂ ಆಗಾಗ ಕನಸಿನಲ್ಲಿ ಬಂದು ಮಾತನಾಡಿಸಿ ಹೋಗುತ್ತಿದ್ದರು! ಎಲ್ಲಿಂದ ಬರುತ್ತಿದ್ದರು? ಎಲ್ಲಿಗೆ ಹೋಗುತ್ತಿದ್ದರು? ಯೋಚಿಸಿ ನೋಡಿದೆ. ಏನೂ ಹೊಳೆಯಲಿಲ್ಲ. ಸುಮ್ಮನೆ ಅಲ್ಲೇ ಕುಳಿತುಕೊಂಡಿರುವುದು ಮಾತ್ರ ಮನವರಿಕೆಯಾಗುತ್ತಿತ್ತು. ಏನೇನೊ ಯೋಚನೆಗಳು? ನಾನು ಬದುಕಿದ್ದಾಗಲೂ ಇದೇ ರೀತಿಯ ಯೋಚನೆಗಳು ಬರುತ್ತಿದ್ದವು.

ಇದ್ದಕ್ಕಿದ್ದ ಹಾಗೆ ಎಮ್ಮೆ ಮೇಲೆ ಕುಳಿತುಕೊಂಡು ಕೈಯಲ್ಲಿ ಯಮಪಾಶ ಹಿಡಿದುಕೊಂಡು ಆಕಾಶದ ಮೂಲಕ ಬರುವ ಯಮರಾಜನ ಜ್ಞಾಪಕ ಬಂದುಬಿಟ್ಟಿತು. ನಿಜವಾಗಿಯೂ ಅವನು ಬರುವನೇನೊ? ಬಂದು ನನ್ನನ್ನ ಕರೆದುಕೊಂಡು ಹೋಗುತ್ತಾನೇನೊ? ಒಂದು ಕ್ಷಣ ನನ್ನ ದೇಹದ ಒಳಕ್ಕೆ ಚಳಿ ಹೊಕ್ಕಂತಾಗಿ ಚೀರಿಕೊಳ್ಳಬೇಕೆನಿಸಿತು. ಸತ್ತ ಮೇಲೆ ಭಯವೇಕೆ? ಆದರೆ ನಿಜವಾಗಿಯೂ ಯಮನು ಬಂದು ನನಗೆ ಏನಾದರೂ ತೊಂದರೆ ಮಾಡಿದರೆ? ಬಂದಾಗ ನೋಡಿಕೊಳ್ಳೋಣ. ಇಷ್ಟಕ್ಕೂ ಅವನು ಇದ್ದಾನೊ ಇಲ್ಲವೊ ಗೊತ್ತಿಲ್ಲ! ಥೂಃ ಇವನ ಬಗ್ಗೆ ಯಾಕಾದರೂ ಆಲೋಚನೆ ಬಂದಿತು? ಸದ್ಯಕ್ಕೆ ಅವನನ್ನು ಮರೆಯುವುದು ಒಳಿತೆಂದು ಮರೆಯಲು ಪ್ರಯತ್ನಿಸಿದೆ. ಆದರೂ ಅದೇಕೊ ಅವನು ಎಮ್ಮೆ ಮೇಲೆ ಕುಳಿತುಕೊಂಡು ಆಕಾಶದಿಂದ ಇಳಿಯುತ್ತ ನನ್ನ ಕಡೆಗೆ ಬರುತ್ತಿರುವಂತೆ ಅನಿಸತೊಡಗಿತು. ನಾನು ಯಾರಿಗೂ ಏನೂ ಮೋಸ ಮಾಡಿಲ್ಲ. ಲಂಚ ತೆಗೆದುಕೊಂಡಿಲ್ಲ. ಅಣ್ಣ ತಮ್ಮಂದಿರರಿಗೆ ದ್ರೋಹ ಬಗೆದಿಲ್ಲ. ನನಗೇಕೆ ಯಮರಾಜನ ಭಯ?

ನನ್ನ ಹೃದಯದಲ್ಲಿ ಅಂದರೆ ನನ್ನ ಹಿಂದಿನ ದೇಹದಲ್ಲಿ ಇನ್ನೂ ರಕ್ತದ ಚಲನೆ ನಿಂತಿರಲಿಲ್ಲ. ದೇಹದಲ್ಲಿನ ಬಿಸಿಯೂ ಆರಿರಲಿಲ್ಲ. ಅಂಗಾಂಗಗಳು ಬದುಕಿಯೇ ಇದ್ದವು. ಆ ಐದು ನಿಮಿಷಗಳ ಕಾಲ



## ಡಾ. ಎಂ.ವೆಂಕಟಸ್ವಾಮಿ

ಭೂವಿಜ್ಞಾನಿ ಮತ್ತು ಲೇಖಕರಾಗಿ ಹೆಸರು ಮಾಡಿರುವ ಡಾ. ಎಂ.ವೆಂಕಟಸ್ವಾಮಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕಿನ ಬ್ಯಾಟರಾಯನಹಳ್ಳಿಯವರು. 1955ರ ನವೆಂಬರ್ 6ರಂದು ಜನಿಸಿದ ಇವರು ಖ್ಯಾತ ಕೋಲಾರ ಚಿನ್ನದ ಗಣಿಗಳ 'ಲಿಟ್ಲ್ ಇಂಗ್ಲೆಂಡ್' ಖ್ಯಾತಿ ಮತ್ತು ಚಿನ್ನದ ಗಣಿಗಳ ಕಾರ್ಮಿಕರ ಬವಣೆಗಳನ್ನು ಹತ್ತಿರದಿಂದ ನೋಡಿದವರು. ಕೆ.ಜಿ.ಎಫ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎಸ್ಸಿ. ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (ಭೂವಿಜ್ಞಾನ) ಎಂ.ಎಸ್ಸಿ. ಮುಗಿಸಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಗೆ (ಜಿ.ಎಸ್.ಐ) ಸೇರಿ ಭಾರತದಾದ್ಯಂತ ಓಡಾಡಿ ಅಪಾರ ಅನುಭವ ಪಡೆದಿದ್ದಾರೆ. ಕೋಲಾರ ಚಿನ್ನದ ಗಣಿಗಳ (ಚಾರಿತ್ರಿಕ, ಸಾಂಸ್ಕೃತಿಕ ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ) ಬಗ್ಗೆ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಮಹಾಪ್ರಬಂಧ ಒಪ್ಪಿಸಿ ಅದಕ್ಕಾಗಿ ಡಿ.ಲಿಟ್. ಪದವಿ ಪಡೆದಿದ್ದಾರೆ. ಇದೇ ಮಹಾಪ್ರಬಂಧ ಕನ್ನಡದಲ್ಲಿ `ಕೋಲಾರ ಚಿನ್ನದ ಗಣಿಗಳು' ಮತ್ತು ಇಂಗ್ಲಿಷ್‌ನಲ್ಲಿ `Kolar Gold Mine' (A short history of Gold Mining and its socioeconomic impact), Geological Society of India, Bangalore ಎಂಬ ಪುಸ್ತಕಗಳಾಗಿ ಪ್ರಕಟಗೊಂಡಿವೆ.

ಕನ್ನಡದ ಹೆಸರಾಂತ ಪತ್ರಿಕೆಗಳಲ್ಲಿ ಇವರ ಹಲವಾರು ಕತೆ, ಕವನ, ಕಾದಂಬರಿ, ವೈಚಾರಿಕ, ವಿಮರ್ಶೆ ಮತ್ತು ವಿಜ್ಞಾನ ಲೇಖನಗಳು ಪ್ರಕಟವಾಗಿವೆ. ಕೆಲವು ಟಿ.ವಿ ಧಾರಾವಾಹಿಗಳಿಗೆ ಚಿತ್ರಕತೆ– ಸಂಭಾಷಣೆ ಬರೆದಿದ್ದಾರೆ. ರೇಡಿಯೊ ಕಾರ್ಯಕ್ರಮಗಳನ್ನು ನೀಡಿದ್ದಾರೆ. ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಈಶಾನ್ಯ ಭಾರತದ ಸಾಹಿತ್ಯವನ್ನು ಕನ್ನಡಕ್ಕೆ ಮೊದಲು ತಂದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಈಶಾನ್ಯ ಭಾರತದ ಕವಿತೆಗಳು, ಏಳು ಪರ್ವತಗಳು ಒಂದು ನದಿ (ಈಶಾನ್ಯ ಭಾರತದಲ್ಲಿ 8 ವರ್ಷಗಳು ಕೆಲಸ ಮಾಡಿದ ಅನುಭವ ಕಥನ),ಈಶಾನ್ಯ ಭಾರತದ ಆಧುನಿಕ ಮತ್ತು ಐತಿಹ್ಯ ಕಥೆಗಳು ಇವರ ಸಾಹಿತ್ಯ ಬತ್ತಳಿಕೆಯಲ್ಲಿ ತುಂಬಿವೆ.

'ಪ್ರಜಾವಾಣಿ' ಮತ್ತು ಇತರ ಹೆಸರಾಂತ ಪತ್ರಿಕೆಗಳಲ್ಲಿ ಪರಿಸರ ಮತ್ತು ವಿಜ್ಞಾನಕ್ಕೆ ಸಂಬಂಧಪಟ್ಟ ಲೇಖನಗಳು, ವಿಮರ್ಶಾ ಬರಹಗಳು, ಲೇಖನ ಮಾಲೆ ಪ್ರಕಟವಾಗಿವೆ. ಒಟ್ಟು 9 ಕವನ ಸಂಕಲನಗಳು, 'ಮೂಡಲ ಮರೆಯಲ್ಲಿ', 'ನೀ ನಡೆವ ದಾರಿಯಲ್ಲಿ', 'ಭೂಮಿ ತೂಕದ ಹುಡುಗ'.. ಹೀಗೆ ಒಟ್ಟು ಏಳು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ವಿಜ್ಞಾನಕ್ಕೆ ಸಂಬಂಧಿಸಿದ ಒಟ್ಟು 8 ಕೃತಿಗಳು ಪ್ರಕಟವಾಗಿವೆ.

'ತಲೆಮಾರುಗಳ ಅಂತರ' ವೆಂಕಟಸ್ವಾಮಿ ಅವರು 'ಸುಧಾ' ಓದುಗರಿಗಾಗಿಯೇ ಬರೆದ ವಿನೂತನ ಕಾದಂಬರಿ. ಇದು ಆತ್ಮಗಳ ಕಥೆಯಾಗಿದ್ದು, ಓದುಗರಿಗೆ ವಿಭಿನ್ನ ಅನುಭವ ನೀಡಲಿದೆ.